ದಿನಾಂಕ 10.06.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2, 3 ಮತ್ತು 5ನೇ ಪ್ರತಿವಾದಿಗಳ ಪರ ಶ್ರೀ ಬಿ.ವಿ.ಎಲ್., ವಕೀಲರಿಂದಃ-

ನಾನು ವಿದ್ಯಾಭ್ಯಾಸ ಮಾಡಿಲ್ಲ. ವಾದಪತ್ರದಲ್ಲಿ ಏನು ಬರೆಸಿದ್ದೇನೆ ಎಂದು ಗೊತ್ತಿದೆ. ದಾವೆ ಸಲ್ಲಿಸಲು ವಕೀಲರಿಗೆ ಮಾಹಿತಿ ಕೊಟ್ಟದ್ದು ನಾವೇ. ಅಂದರೆ 3 ಜನ ಹೆಣ್ಣು ಮಕ್ಕಳು, 3 ಜನ ಗಂಡು ಮಕ್ಕಳು ಸೇರಿ ಮಾಹಿತಿ ಕೊಟ್ಟಿದ್ದೇವೆ. ಮೃತ 1ನೇ ವಾದಿ ತೀರಿಕೊಳ್ಳುವ ಕಾಲಕ್ಕೆ ಅವರಿಗೆ ವಯಸ್ಸು ಸುಮಾರು 70 ವರ್ಷ ಆಗಿತ್ತು. ನನ್ನ ಮದುವೆಯಾಗಿ 50 ವರ್ಷಗಳಾವೆ. ಪುಟ್ಟಮ್ಮರವರ ಮದುವೆಯಾಗಿ 52 ವರ್ಷಗಳಾಗಿರಬಹುದು. ಮೃತ 1ನೇ ವಾದಿಯ ಮದುವೆ ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ಇತರ ವಾದಿಗಳ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಇತರ ವಾದಿಗಳು ಅವರ ಪರವಾಗಿ ನಾನು ಸಾಕ್ಷಿ ನುಡಿಯಲು ನನಗೆ ಲಿಖಿತ ರೂಪದಲ್ಲಿ ಅಧಿಕಾರ ಕೊಟ್ಟಿಲ್ಲ. ಈ ವಿಚಾರವನ್ನು ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆಸಿದ್ದೀರಾ ಎಂದರೆ ನಾನು ಓದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ಕನ್ನಡ ಭಾಷೆಯಲ್ಲಿ ಬರೆದಿದೆ. ನನಗೆ ಕನ್ನಡ ಭಾಷೆ ಓದಲು, ಬರೆಯಲು ಬರುವುದಿಲ್ಲ. ಕನ್ನಡದಲ್ಲಿ ಸಹಿ ಮಾತ್ರ ಹಾಕುತ್ತೇನೆ.

2. ಈ ದಾವೆಯನ್ನು ವೆಂಕಟರಾಮಯ್ಯ, ಕೃಷ್ಣಪ್ಪ, ಶಿವಣ್ಣರವರ ವಿರುದ್ಧ ಹಾಕಿದ್ದೇವೆ. ಈ ದಾವೆಯನ್ನು ಜಮೀನಿಗೆ ಸಂಬಂಧಪಟ್ಟಂತೆ ಹಾಕಿದ್ದೇವೆ. ಈ ದಾವೆಯನ್ನು ಸರ್ವೇ ನಂ.10/1, 165, 39/8 ಹಾಗೂ ಒಂದು ಮನೆಗೆ ಹಾಕಿದ್ದೇವೆ. ಯಾವ ಯಾವ ಸರ್ವೇ ನಂಬರ್‌ನಲ್ಲಿ

ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಬಿಟ್ಟು ನಮಗೆ ಬೇರೆ ಆಸ್ತಿಗಳಿವೆ ಎಂದರೆ ಸರಿಯಲ್ಲ. ನಿಮ್ಮ ಅಣ್ಣಂದಿರು ವಾಸವಾಗಿರುವ ಮನೆಯನ್ನು ಸೇರಿಸಿಲ್ಲ ಎಂದರೆ ಸಾಕ್ಷಿಯು ಸೇರಿಸಿದ್ದೇವೆ ಎಂದು ನುಡಿಯುತ್ತಾರೆ.

3. ನಿಮ್ಮ ಮದುವೆಯಾದ ನಂತರ ನಿಮ್ಮ ಅಣ್ಣ ತಮ್ಮಂದಿರು ಬೇರೆ ಬೇರೆ ವಾಸವಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಮದುವೆ ಕಾಲಕ್ಕೆ ಒಟ್ಟಿಗೆ ಇದ್ದೆವು, ಈಗ ಬೇರೆ ಬೇರೆ ವಾಸವಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಸಹೋದರರು 30 ವರ್ಷಗಳಿಂದ ಬೇರೆ ಬೇರೆ ವಾಸವಿದ್ದಾರೆ. ದಾವಾ ಆಸ್ತಿಗಳು ನಮ್ಮ ತಾತನ ಆಸ್ತಿಗಳು ಅಂದರೆ ಪಿತ್ರಾರ್ಜಿತ ಆಸ್ತಿಗಳು. ನಿಮ್ಮ ತಾತನಿಗೆ ದಾವಾ ಆಸ್ತಿಗಳು ಹೇಗೆ ಬಂದವು ಎಂದು ತೋರಿಸಲು ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಮೂಲ ಪತ್ರ ಕೇಳಿದ್ದರು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ನಿಮ್ಮ ತಾತನಿಗೆ ಹೇಗೆ ಬಂದವು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಬುದ್ಧಿ ಬಂದಾಗಿನಿಂದ ಎಲ್ಲಾ ಒಟ್ಟಿಗೆ ಸಾಗುವಳಿ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ನೀವು ಯಾವುದೇ ದಾಖಲೆ ನೋಡಿಲ್ಲ ಎಂದರೆ ಸಾಕ್ಷಿಯು ಆವಾಗಿನಿಂದಲೂ ನಮ್ಮ ತಾತನ ಆಸ್ತಿಗಳು ಎಂದು ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ನಿಮ್ಮ ಸಹೋದರರಿಗೆ ಏನೆಂದು ನೋಟಿಸ್ ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ಕೇಸು ಹಾಕಿದ್ದೇವೆ ಎಂದು ಕಳುಹಿಸಿದ್ದೆವು, ಕೆಲವು ನೋಟಿಸ್ ತೆಗೆದುಕೊಂಡು ಹರಿದು ಹಾಕಿದ್ದಾರೆ ಎಂದು ನುಡಿಯುತ್ತಾರೆ. ನೋಟಿಸ್‌ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

4. ನಾವು ಕಳುಹಿಸಿದ ನೋಟಿಸ್‌ಗೆ ಪ್ರತಿವಾದಿಗಳು ಜವಾಬು ಕಳುಹಿಸಿದ್ದಾರೆ ಎಂದರೆ ಸಾಕ್ಷಿಯು ಬಂದಿಲ್ಲ ಎಂದು ನುಡಿಯುತ್ತಾರೆ. ಈ ಕೇಸು ಹಾಕಲು ದಾಖಲೆ ಒದಗಿಸಿದ್ದು ನಾನೇ. ಪ್ರತಿವಾದಿಗಳು ಕಳುಹಿಸಿರುವ ಜವಾಬು ನೋಟಿಸನ್ನು ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿಯು ಅದೆಲ್ಲಾ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಹಾಜರುಪಡಿಸಿರುವ ದಾಖಲೆಗಳಲ್ಲಿ ಏನಿದೆ ಎಂದು ಗೊತ್ತಿದೆಯಾ ಎಂದರೆ ಸಾಕ್ಷಿಯು ನಮ್ಮ ವಕೀಲರು ಕೇಳಿರುವುದನ್ನೆಲ್ಲಾ ಕೊಟ್ಟಿದ್ದೇವೆ ನಾನು ಓದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಅಣ್ಣಂದಿರು ಎಷ್ಟು ವರ್ಷಗಳ ಹಿಂದೆ ಭಾಗ ಮಾಡಿಕೊಂಡರು ಎಂದರೆ ಸಾಕ್ಷಿಯು ಭಾಗ ಆಗಿಲ್ಲ, ಎಲ್ಲಾ ಒಟ್ಟಿಗೆ ಇದ್ದೇವೆ ಎಂದು ನುಡಿಯುತ್ತಾರೆ. ರಾಗಿ ಮಾತ್ರ ನಿಮಗೆ ಕೊಡುತ್ತಿದ್ದರು ಪ್ರತಿವಾದಿಗಳು ಪ್ರತ್ಯೇಕವಾಗಿ ಉಳುಮೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಎಲ್ಲಾ ಒಟ್ಟಿಗೆ ಉಳುಮೆ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. 20 ವರ್ಷಗಳಿಂದ ನಮಗೆ ಜಮೀನಿನಲ್ಲಿ ಉಳುಮೆ ಮಾಡಲು ಬಿಟ್ಟಿಲ್ಲ, ನಮ್ಮ ತಂದೆ ತೀರಿಕೊಳ್ಳುವ ಮುಂಚೆ ಒಟ್ಟಿಗೆ ಉಳುಮೆ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನಿಮ್ಮ ತಂದೆ ತೀರಿಕೊಂಡ ನಂತರ ಗಂಡು ಮಕ್ಕಳು ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಪ್ರತ್ಯೇಕವಾಗಿ ಸ್ವಾಧೀನ ಇದ್ದಾರೆ ಎಂದರೆ ಸಾಕ್ಷಿಯು ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ, ವೆಂಕಟರಮಣಪ್ಪ ಭಾಗ ಕೊಡುತ್ತೇವೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ಪಹಣಿ, ಮ್ಯುಟೇಶನ್ ನೋಡಿದ್ದೇನೆ. ದಾವಾ ಸ್ವತ್ತುಗಳು ಯಾರ ಹೆಸರಿನಲ್ಲಿ ಬರುತ್ತಿವೆ ಎಂದರೆ ಅವರು ಮಾಡಿಕೊಂಡಿರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾಖಲೆಗಳನ್ನು ಈ ಕೇಸು ಹಾಕಿದ ನಂತರ ಮಾಡಿಕೊಂಡಿದ್ದಾರೆ. ಖಾತೆ, ಕಂದಾಯ ದಾಖಲೆಗಳನ್ನು

ರೆವಿನ್ಯೂ ನ್ಯಾಯಾಲಯಗಳಲ್ಲಿ ಪ್ರಶ್ನಿಸಿಲ್ಲ.

5. 42 ವರ್ಷಗಳಿಂದ ನಿಮ್ಮ ಸಹೋದರರು ಪ್ರತ್ಯೇಕವಾಗಿ ಉಳುಮೆ ಮಾಡಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಅವರವರೇ ಸ್ವಲ್ಪ ಸ್ವಲ್ಪ ಹಂಚಿಕೊಂಡು ಉಳುಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ದಿನಾಂಕ 02.12.1982 ರಂದು ನಿಮ್ಮ ಸಹೋದರರು ವಿಭಾಗ ಪತ್ರ ಮಾಡಿಕೊಂಡು ಪ್ರತ್ಯೇಕವಾಗಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಸಹಿಯನ್ನು ಪಡೆದಿಲ್ಲ, ಕೇಸು ಹಾಕಿದ ಮೇಲೆ ದಾಖಲೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 1982 ರ ವಿಭಾಗ ಪತ್ರದಂತೆ ಖಾತೆ ಮಾಡಿಸಿಕೊಂಡು ನಿಮ್ಮ ಸಹೋದರರು ಪ್ರತ್ಯೇಕವಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಕೇಸು ಹಾಕಿದ ಮೇಲೆ ಮಾಡಿಕೊಂಡಿದ್ದಾರೆ, ನಾವು ಸಹಿ ಹಾಕಿಲ್ಲ ಎಂದು ನುಡಿಯುತ್ತಾರೆ. ನನ್ನ ಸಹೋದರರೆಲ್ಲಾ ಬೇರೆ ಬೇರೆ ಮನೆಗಳಲ್ಲಿ ವಾಸವಿದ್ದಾರೆ, ಪ್ರತ್ಯೇಕವಾಗಿ ರೇಷನ್ ಕಾರ್ಡಿವೆ ಎಂದರೆ ಸರಿ.

ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರ ಮನವಿಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.